## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2019-20ನೇ ಸಾಲಿನ ಆರ್ಥಿಕ ವರ್ಷದ ಜನವರಿ-2020 ರಿಂದ ಮಾರ್ಚ್-2020ರ ವರೆಗಿನ ಅವಧಿಗೆ ಗದಗಿನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಹಾಗೂ ಬೆಂಗಳೂರಿನ ಪ್ರಾದೇಶಿಕ ಕಛೇರಿಗಳಿಗೆ 4ನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 121 ಜಿಪಸ 2019, ದಿನಾಂಕ:09-05-2019.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 121 ಜಿಪಸ 2019, ದಿನಾಂಕ:28-08-2019.
3. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 121 ಜಿಪಸ 2019, ದಿನಾಂಕ:01-01-2020.
4. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 121 ಜಿಪಸ 2019, ದಿನಾಂಕ:31-01-2020.
5. ಪೂರಕ ಅಂದಾಜುಗಳು 2019-20(ಮೊದಲನೇ ಕಂತು).

**ಪ್ರಸ್ತಾವನೆ:**

2019-20ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ:2515-00-102-0-13(101-ಸಹಾಯಧನ-ವೇತನಗಳು) ರಡಿಯಲ್ಲಿ ರೂ.96.00ಲಕ್ಷಗಳನ್ನು, ಲೆಕ್ಕಶೀರ್ಷಿಕೆ:2515-00-102-0-13(103-ಸಹಾಯಧನ-ಸಾಮಾನ್ಯ)ರಡಿ ರೂ.1087.00ಲಕ್ಷಗಳು[ಪೂರಕ ಅಂದಾಜುಗಳು 2019-20(ಮೊದಲನೇ ಕಂತು)] ಹಾಗೂ ಲೆಕ್ಕಶೀರ್ಷಿಕೆ: 2515-00-102-0-13(115-ಸಹಾಯಧನ-ಗುತ್ತಿಗೆ/ಹೊರಗುತ್ತಿಗೆ) ರಡಿಯಲ್ಲಿ ರೂ.290.00ಲಕ್ಷಗಳನ್ನು ವೇತನ ಹಾಗೂ ವೇತನವಲ್ಲದ ಇತರೆ ಖರ್ಚುಗಳಿಗಾಗಿ ಒಟ್ಟು ರೂ.1473.00ಲಕ್ಷಗಳನ್ನು ಗದಗಿನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ವಿಶ್ವವಿದ್ಯಾಲಯಕ್ಕೆ ಒದಗಿಸಲಾಗಿದೆ. ಮೊದಲನೇ ಕಂತಿನ ಅನುದಾನವನ್ನು ಮೇಲೆ ಓದಲಾದ (1) ಎರಡನೇ ಕಂತಿನ ಅನುದಾನವನ್ನು ಮೇಲೆ ಓದಲಾದ (2) ಮತ್ತು ಮೂರನೇ ಕಂತಿನ ಅನುದಾನವನ್ನು ಮೇಲೆ ಓದಲಾದ (3) ಮತ್ತು (4)ರ ಆದೇಶಗಳಲ್ಲಿ ಸಂಬಂಧಪಟ್ಟ ಲೆಕ್ಕಶೀರ್ಷಿಕೆಗಳಡಿ ಈ ಕೆಳಕಂಡಂತೆ ಬಿಡುಗಡೆ ಮಾಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಆಯವ್ಯಯದಲ್ಲಿ ಒದಗಿಸಿರುವ ಅನುದಾನ | ಒಂದನೇ ಕಂತಾಗಿ ಬಿಡುಗಡೆ ಮಾಡಲಾದ ಅನುದಾನ | ಎರಡನೇ ಕಂತಾಗಿ ಬಿಡುಗಡೆ ಮಾಡಲಾದ ಅನುದಾನ | ಮೂರನೇ ಕಂತಾಗಿ ಬಿಡುಗಡೆ ಮಾಡಲಾದ ಅನುದಾನ | ನಾಲ್ಕನೇ ಕಂತಾಗಿ ಬಿಡುಗಡೆಗೊಳಿಸುವ ಅನುದಾನ |
|---|---|---|---|---|---|---|
| 1. | 2515-00-102-0-13(101) | 96.00 | 24.00 | 24.00 | 24.00 | 24.00 |
| 2. | 2515-00-102-0-13(103) | 1087.00 | 396.75 | 396.75 | - | - |
| 3. | 2515-00-102-0-13(115) | 290.00 | 72.50 | 72.50 | 72.50 | 72.50 |

ಗದಗಿನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಹಾಗೂ ಬೆಂಗಳೂರಿನ ಪ್ರಾದೇಶಿಕ ಕಛೇರಿ ಇಲ್ಲಿಯ ಅಧಿಕಾರಿಗಳ ವೇತನ ಹಾಗೂ ಭತ್ಯೆಗಳು ಮತ್ತು ಗುತ್ತಿಗೆ/ಹೊರಗುತ್ತಿಗೆ ನೌಕರರಿಗೆ ಸಹಾಯಧನ ವೆಚ್ಚಗಳಿಗಾಗಿ ನಾಲ್ಕನೇ ಕಂತನ್ನು ಬಿಡುಗಡೆ ಮಾಡಲು ಉದ್ದೇಶಿಸಿದೆ. ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 121 ಜಿಪಸ 2019 ಬೆಂಗಳೂರು, ದಿನಾಂಕ:05-03-2020.**

ಮೇಲಿನ ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು, ಗದಗಿನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಹಾಗೂ ಬೆಂಗಳೂರಿನ ಪ್ರಾದೇಶಿಕ ಕಛೇರಿಗಳಿಗೆ ಲೆಕ್ಕ ಶೀರ್ಷಿಕೆ:2515-00-102-0-13(101-ಅಧಿಕಾರಿಗಳ ವೇತನ ಹಾಗೂ ಭತ್ಯೆಗಳು)ರಡಿಯಲ್ಲಿ ಅಧಿಕಾರಿಗಳ ವೇತನ ಹಾಗೂ ಭತ್ಯೆಗಳ ವೆಚ್ಚಗಳಿಗಾಗಿ ರೂ.24.00ಲಕ್ಷಗಳನ್ನು ಹಾಗೂ ಲೆಕ್ಕಶೀರ್ಷಿಕೆ:2515-00-102-0-13(115-ಸಹಾಯಧನ-ಗುತ್ತಿಗೆ/ಹೊರಗುತ್ತಿಗೆ) ರಡಿಯಲ್ಲಿ ರೂ.72.50ಲಕ್ಷಗಳನ್ನು ನಾಲ್ಕನೇ ಕಂತಾಗಿ ಬಿಡುಗಡೆಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇದರ ಬ್ಯಾಂಕ್ ಉಳಿತಾಯ ಸಂಖ್ಯೆ:36538494457 (ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗೌರ್ನಮೆಂಟ್ ಎಸ್ಟೇಟ್ ಬ್ರಾಂಚ್, ಗದಗ, IFSC Code: SBIN0011270, Branch Code:11270, Recipient Code:1200736300)ಗೆ ಖಜಾನೆ-2 ಮೂಲಕ ಜಮೆ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಜಿಲ್ಲಾ ಪಂಚಾಯತ್ ಶಾಖೆ ಇವರಿಗೆ ಅನುದಾನದ ಬಿಲ್ಲಿನ ಮೇಲೆ ರುಜು ಮಾಡಿ ಸೆಳೆಯಲು ಆದೇಶಿಸಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಗ್ರಾಅಪ 121 ಜಿಪಸ 2019, ದಿನಾಂಕ: 25-02-2020ರಲ್ಲಿ ನೀಡಿರುವ ಅಭಿಪ್ರಾಯದಂತೆ ಹಾಗೂ ಆರ್ಥಿಕ ಇಲಾಖೆಯ ಅದೇಶ ಸಂಖ್ಯೆ:ಎಫ್‌ಡಿ 01 ಟಿಎಫ್‌ಪಿ 2020, ದಿನಾಂಕ:13-01-2020ರಲ್ಲಿ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

05/03/2020

(ಸಿ. ಮಂಜುಳಾ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

05.03.2020

**ಇವರಿಗೆ:**

1. ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಇ ಅಂಡ್ ಆರ್ ಎಸ್ ಎ), ಕರ್ನಾಟಕ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
5. ಕುಲಪತಿಗಳು, ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ.
6. ಕುಲಸಚಿವರು, ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ.
7. ನಿರ್ದೇಶಕರು ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
8. ಯೋಜನಾ ನಿರ್ದೇಶಕರು(ಖಜಾನೆ-2), ವಾಣಿಜ್ಯ ತೆರಿಗೆ ಇಲಾಖೆ ಕಟ್ಟಡ, 7ನೇ ಮಹಡಿ, ಗಾಂಧಿನಗರ, ಬೆಂಗಳೂರು-1.
9. ಉಪನಿರ್ದೇಶಕರು, ಜಿಲ್ಲಾ ಖಜಾನೆ, ಗದಗ.
10. ಹಣಕಾಸು ಅಧಿಕಾರಿ, ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ.
11. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
12. ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು/ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಪ್ರತಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.